ಓ. ಎಸ್. ನಂಃ 102/2007

ಪಿ. ಡಬ್ಲ್ಯೂಃ 2

ದಿಃ 28-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಕೆ ಜಿ ಪ್ರತಿ ವಾದಿ ಪರ ವಕೀಲರಿಂದ ಃ

6. ಬೋಪಾಲಪ್ಪ ಬಸವಂತಪ್ಪ ನೇಮಣ್ಣವರ ಅವರು ವಿಜಯಾ ಬ್ಯಾಂಕ ಶಿರಸಿಯಲ್ಲಿ ಸಾಲ ಮಾಡಿದ್ದರು ಸದರಿ ಸಾಲವನ್ನು ಯಾರು ಕಟ್ಟಿದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಒ ಎಸ್ ನಂಬರ 4/2007 ರಲ್ಲಿ ಸುದಾ ನೇಮಣ್ಣವರ ಅವರು ಸದರಿ ಸಾಲವನ್ನು ಕಟ್ಟಿದಾರೇ ಎಂಬ ಬಗ್ಗೆ ಡಿಕ್ರಿ ಕೂಡ ಆಗಿರುತ್ತದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಸೃಷ್ಟಿ ಮಾಡಿ ಡಿಕ್ರಿಯನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸುದಾ ನೇಮಣ್ಣವರ ಅವರು ಬೋಪಾಲಪ್ಪ ಬಸವಂತಪ್ಪ ನೇಮಣ್ಣವರ ಅವರ ಹೆಂಡತಿ ಇರುವುದರಿಂದ ಅವರಿಗೆ ನ್ಯಾಯಾಲಯವು ಒ ಎಸ್ ನಂಬರ 4/2007 ರಲ್ಲಿ ಲೀಗಲ್ ನೋಟಿಸ ಕೊಟ್ಟಿದ್ದು ಆ ಪ್ರಕಾರ ಸದರಿ ಬೈಕಿನ ಸಾಲ ಸುದಾ ನೇಮಣ್ಣವರ ಅವರು ಕಟ್ಟಿರುತ್ತಾರೆ ಮತ್ತು ಆ ಪ್ರಕಾರ ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿಯು ಕಟ್ಟಿರಬಹುದು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸುದಾ ನೆಮಣ್ಣವರ ಅವರು ಬೋಪಾಲಪ್ಪ ನೇಮಣ್ಣವರ ಅವರ ಹೆಂಡತಿ ಇರುವುದರಿಂದ ಶಿರಸಿ ನ್ಯಾಯಾಲಯವು ಅವರಿಗೆ ನೋಟಿಸ ಕೊಟ್ಟು ವಸೂಲಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ .

7. ಬೋಪಾಲಪ್ಪ ನೇಮಣ್ಣವರ ಅವರು ಪ್ರಾರಂಬದಲ್ಲಿ ಎಷ್ಟನೇ ಈಸವಿಯಲ್ಲಿ ನೌಕರಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ದಿ 07-05-1982 ರಂದು ಬೋಪಾಲಪ್ಪ ಅವರ ಮದುವೆ ಆಗಿರುತ್ತದೆ . ಅವರು ಪ್ರಾರಂಬದಲ್ಲಿ ನೌಕರಿ ಮಾಡುತ್ತಿದ್ದಾಗ ಕ್ವಾಟರ್ಸನಲ್ಲಿ ಇದ್ದರಾ ಅಥವಾ ಮನೆ ಇತ್ತಾ ಎಂದರೆ ಸಾಕ್ಷಿಯು ಮನೆಗೆ ಹೋಗುವುದು ಬರುವುದು ಮಾಡುತ್ತಿದ್ದರು ಎಂದು ನುಡಿಯುತ್ತಾರೆ . ಅವರು ಮೊದಲು ಹೊಸುರುನಲ್ಲಿ ಕೆಲಸ ಮಾಡುತ್ತಿದ್ದರು ನಂತರ ಕಲಕಟ್ಟಿ ಹುಲಿಕಟ್ಟಿಯಲ್ಲಿ ಕೆಲಸ ಮಾಡುತ್ತಿದ್ದರು . ಹುಲಕಟ್ಟಿ ಗ್ರಾಮದಲ್ಲಿ ಅವರು ಕೆಲಸ ಮಾಡುತ್ತಿದ್ದಾಗ ಅವರ ಜೊತಗೆ ಯಾವ ಶಿಕ್ಷಕರು

ಸಹವರ್ತಿಗಳು ನೌಕರಿ ಮಾಡುತಿದ್ದರು ಎಂದು ನನಗೆ ನೆನಪಿಲ್ಲ . ಅವರ ಜೊತೆಗೆ ಕಾಂಬಳೆ ಎನ್ನುವವರು ಕೆಲಸ ಮಾಡುತಿದ್ದರು ಎಂದರೆ ನನಗೆ ನೆನಪಿಲ್ಲ . ಬೋಪಾಲಪ್ಪ ಅವರಿಗೆ ಜನ ಮೆಚ್ಚಿದ ಶಿಕ್ಷಕ ಎಂದು ಬಡ್ತಿ ಮಾಡಿದರು ಯಾವ ಊರಿನಲ್ಲಿ ಮಾಡಿದರು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಬೋಪಾಲಪ್ಪ ಅವರು ಯಾವ ಶಿಕ್ಷಕರು ಇದ್ದರು ಎಲ್ಲಿಂದ ಎಲ್ಲಿಗೆ ಹೋದರು ಎಂದು ನಿಮಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಮುಗಳಿಕಟ್ಟಿ ಇಂದ ಯಾವ ಊರಿಗೆ ಅವರು ಹೋದರು ಎಂದರೆ ಸಾಕ್ಷಿಯು ಅವರು ಕೊನೆವರೆಗೆ ಮುಗಳಿಕಟ್ಟಿಯಲ್ಲಿ ಯೇ ಇದ್ದರು ಎಂದು ನುಡಿಯುತ್ತಾರೆ. ಅವರಿಗೆ ಮುಖ್ಯ ಶಿಕ್ಷಕರು ಎಂದು ಬಡ್ತಿ ಆಗಿತ್ತು . ಅವರು ಸುಮಾರು 3-4 ಊರಿಗೆ ವರ್ಗಾವಣೆ ಆಗಿ ಹೋಗಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಅವರಿಗೆ ಹೊಸುರು, ಹುಲಿಕಟ್ಟಿ ಮತ್ತು ಮುಗಳಿಕಟ್ಟಿಯಲ್ಲಿ ವರ್ಗಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಬೋಪಾಲಪ್ಪ ಅವರು ಸುದಾ ನೆಮಣ್ಣವರ ಅವರೊಂದಿಗೆ ಮದುವೆ ಆದ ನಂತರ ಅವರೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಯಾರೊಂದಿಗೆ ವಾಸವಾಗಿದ್ದರು ಎಂದರೆ ಸಾಕ್ಷಿಯು ಪ್ರೇಮಾ ಬೋಪಾಲಪ್ಪ ನೇಮಣ್ಣವರ ಅವರ ಹೆಂಡತಿ ಒಂದಿಗೆ ಯತ್ತಿನಹಳ್ಳಿಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ . ಬೋಪಾಲಪ್ಪ ಅವರು ಯತ್ತಿನಹಳ್ಳಿಯಲ್ಲಿ ಇರಲಿಲ್ಲ ಅವರಿಗೆ ಎಲ್ಲಿ ವರ್ಗಾವಣೆ ಆಗುತ್ತಾ ಇತ್ತು ಅಲ್ಲಿಗೆ ಅವರು ಅವರ ಹೆಂಡತಿ ಆದ ಸುದಾ ನೆಮಣ್ಣವರ ಅವರೊಂದಿಗೆ ವಾಸವಾಗುತ್ತಿದ್ದರು ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಯತ್ತಿನಹಳ್ಳಿಗೆ ಹೋಗುವುದು ಬರುವುದು ಮಾಡುತ್ತಿದ್ದರು ಮತ್ತೆಲ್ಲಿಯೂ ಅವರು ಮನೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

8. ಬೋಪಾಲಪ್ಪ ಅವರು 2005 ರಲ್ಲಿ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡಾಗ ಯತ್ತಿನಹಳ್ಳಿಯಲ್ಲಿ ಇದ್ದರು. ಅವರಿಗೆ ಸಾಯುವ ಮುಂಚೆ ಯಾವ ರೋಗ ಇತ್ತು ಎಂದರೆ ಸಾಕ್ಷಿಯು ಡಯಾಬಿಟಿಸ ಜಾಸ್ತಿ ಆಗಿದ್ದರಿಂದ ಕಿವಿಯಿಂದ ಕೀವು ಸೊರುತ್ತಾ ಇತ್ತು ಎಂದು ನುಡಿಯುತ್ತಾರೆ. ಅವರ ಉಪಚಾರ ಪ್ರೇಮಾ ಬೋಪಾಲಪ್ಪ ನೇಮಣ್ಣವರ ಮತ್ತು ಅವರ ಅಣ್ಣಂದಿರು ಮತ್ತು ಎಲ್ಲರೂ ಮಾಡುತ್ತಿದ್ದರು. ಬೋಪಾಲಪ್ಪ

ಅವರ ಉಪಚಾರವನ್ನು ಸುದಾ ನೆಮಣ್ಣವರ ಅವರು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸುದಾ ನೆಮಣ್ಣವರ ಅವರೇ ಅವರ ಉಪಚಾರ ಮಾಡಿರುತ್ತಾರೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಪ್ರೇಮಾ ನೇಮಣ್ಣವರ ಉಪಚಾರ ಮಾಡಿರುವ ಬಗ್ಗೆ ಆಸ್ಪತ್ರೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವಿರಾ ಎಂದರೆ ಸಾಕ್ಷಿಯು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ . ಸುದಾ ನೆಮಣ್ಣವರ ಅವರೇ ಅವರ ಉಪಚಾರ ಮಾಡಿರುತ್ತಾರೆ ಎಂದು ಅವರು ರೂ 20,00,000 /- ಕನಿಷ್ಟ ವೆಚ್ಚವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸುದಾ ನೆಮಣ್ಣವರ ಅವರು ಬೋಪಾಲಪ್ಪ ಅವರಿಗೆ ಗಂಟಿ ಆಸ್ಪತ್ರೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ . ಕೆ ಎಮ್ ಸಿ ಯಲ್ಲಿ ಕೂಡ ಅವರು ತೋರಿಸಿರುವ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ . ಹುಬ್ಬಳ್ಳಿ ಸನ್ಮತಿ ಕ್ಲಿನಿಕ ಲ್ಯಾಬೋರೇಟರಿ ಯಲ್ಲಿ ಸ್ಕಾನ ಮಾಡಿದ ಬಗ್ಗೆ ಕೂಡ ಬಿಲ್ಲನ್ನು ಪಡೆದು ಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಎನ್ ಎಮ್ ಆರ್ ಹುಬ್ಬಳಿ ಸ್ಕಾನ ಸೆಂಟರನಲ್ಲಿ ಕೂಡ ಸ್ಕಾನ ಮಾಡಿದ ಬಗ್ಗೆ ಸುದಾ ಅವರು ಬಿಲ್ಲನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕಷ್ಟು ಹಣ ಕರ್ಚು ಮಾಡಿದ ಬಗ್ಗೆ ಸುದಾ ಅವರು ಬಿಲ್ಲನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಬೋಪಾಲಪ್ಪ ಅವರು ನನ್ನ ಅತ್ತೆ ಆದ ಪ್ರೇಮಾ ಅವರೊಂದಿಗೆ ಯಾವತ್ತು ಇರಲಿಲ್ಲ ಮತ್ತು ಪ್ರೇಮಾ ಅವರು ಅವರ ಉಪಚಾರ ಯಾವತ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಈಗ ಸಾಕ್ಷಿಗೆ ಒಂದು ಬಾವಚಿತ್ರವನ್ನು ತೋರಿಸಿ ಅದರಲ್ಲಿ ಇರುವ ವ್ಯಕ್ತಿ ಯಾರು ಎಂದರೆ ಸಾಕ್ಷಿಯು ಬೋಪಾಲಪ್ಪ ಎಂದು ನುಡಿಯುತ್ತಾರೆ. ಸದರಿ ಬಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಗಿದೆ ನಿಡಿ-1 ರಲ್ಲಿ ಬೋಪಾಲಪ್ಪ ಅವರ ಪಕ್ಕಕ್ಕೆ ಇರುವ ಮಹಿಳೆ ಯಾರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬೋಪಾಲಪ್ಪ ಅವರಿಗೆ ಹುಷಾರಿಲ್ಲದ ಸಮಯದಲ್ಲಿ ಉಪಚಾರ ಮಾಡಿದ ಬಗ್ಗೆ ಯಾವ ಪೋಟೊ ಮತ್ತು ಆಸ್ಪತ್ರೆ ದಾಖಲೆಗಳನ್ನು ನೀವು ಹಾಜರುಪಡಿಸಿರುವುದಿಲ್ಲ ಪ್ರೇಮಾ ಬೋಪಾಲಪ್ಪ ಅವರ ಹೆಂಡತಿ ಇರುವುದಿಲ್ಲ ಆ ಕಾರಣಕ್ಕೆ ಅದರ ಬಗ್ಗೆ ನಿಮ್ಮ ಕಡೆ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿಯು ಅದಿಕೃತ ಹೆಂಡತಿ ಇರುವುದರಿಂದ ಆ ಪ್ರಸಂಗ ಬರುವುದಿಲ್ಲ ಎಂದು ನುಡಿಯುತ್ತಾರೆ. ಅದಿಕೃತ

ಹೆಂಡತಿ ಆಗಿದ್ದರೇ ಅವರು ಬಿಲ ಕಟ್ಟಬಹುದಿತ್ತು , ಉಪಚಾರ ಮಾಡಬಹುದಿತ್ತು ಮಾಡಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

9. ಬೋಪಾಲಪ್ಪ ಅವರ ಕೆ ಸಿ ಎಸ್ ಆರ್ ಪಾರ್ಮನ್ನು ಯಾರು ತುಂಬಿದರು ಎಂದರೆ ನನಗೆ ನೆನಪಿಲ್ಲ . ಬೋಪಾಲಪ್ಪ ಅವರು ಕೆ ಸಿ ಎಸ್ ಆರ್ ಪಾರ್ಮನ್ನು ತುಂಬಿ ಅದರಲ್ಲಿ ಸುದಾ ಅವರನ್ನು ನಾಮಿನೀ ಎಂದು ನೇಮಕ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಪ್ರೇಮಾ ಅವರು ಬೋಪಾಲಪ್ಪ ಅವರ ಹೆಂಡತಿ ಆಗಿದ್ದರೆ ಪಾರ್ಮ ನಂಬರ -9 ನ್ನು ತುಂಬ ಬಹುದಿತ್ತು ಎಂದರೆ ಸಾಕ್ಷಿಯು ಆ ಸಮಯದಲ್ಲಿ ಅದರ ಬಗ್ಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ಕೆ ಸಿ ಎಸ್ ಆರ್ ಪಾರ್ಮ-9 ತುಂಬುವಾಗ ಕಾಯ್ದೆ ಶೀರ ನೋಡಿಯೇ ಶಿಕ್ಷಣ ಇಲಾಖೆಯವರು ಅದನ್ನು ಮಂಜೂರು ಮಾಡುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಕೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿ ಕೊಟ್ಟಿರುತ್ತಾರೆ ಎಂದು ನೀವು ಹೇಳಿದ್ದು ಅದರ ಮೇಲೆ ಯಾವುದಾದರೂ ದೂರನ್ನು ಕೊಟ್ಟೀರಾ ಎಂದರೆ ಸಾಕ್ಷಿಯು ಸಂಬಂದಪಟ್ಟ ಇಲಾಖೆಯಲ್ಲಿ ತಕರಾರನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 2006 ನೇ ಈಸವಿಯಲ್ಲಿ ತಕರಾರನ್ನು ಕೊಟ್ಟಿರುತ್ತೇನೆ ಮತ್ತು ಅದರ ಪೂರ್ವದಲ್ಲಿ 2004 ರಲ್ಲಿ ತಕರಾರನ್ನು ಕೊಟ್ಟಿರುತ್ತೇನೆ. ಕೆ ಸಿ ಎಸ್ ಆರ್ ಪಾರ್ಮ-9 ಗೆ ತಕರಾರು ಕೊಟ್ಟಿದ ಬಗ್ಗೆ ಹಿಂಬರಹವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವಿರಾ ಎಂದರೆ ಸಾಕ್ಷಿಯು ಅದರ ಬಗ್ಗೆ ಅಷ್ಟೇ ಇರುವುದಿಲ್ಲ ಸಂಪೂರ್ಣವಾಗಿ ತಕರಾರನ್ನು ಕೊಟ್ಟಿದ ಬಗ್ಗೆ ಹಿಂಬರಹವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ .

10. ಬೋಪಾಲಪ್ಪ ಜೀವಂತ ಇದ್ದಾಗ ಸುದಾ ನೆಮಣ್ಣವರ ಅವರ ಹೆಸರಿಗೆ ಎಲ್ ಐ ಸಿ ಪಾಲಿಸಿಯನ್ನು ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬೋಪಾಲಪ್ಪ ಅವರು ಪ್ರೇಮಾ ಅವರ ಹೆಸರಿಗೆ ಪಾಲಿಸಿ ಮಾಡಿಸಿರುತ್ತಾರೆ ಎಂಬ ಬಗ್ಗೆ ನೀವು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವಿರಾ ಎಂದರೆ ಸಾಕ್ಷಿಯು ಸಲ್ಲಿಸಿಲ್ಲಾ ಆದರೇ ಮುಂದೆ ಸಲ್ಲಿಸಬಹುದು ಎಂದು ನುಡಿಯುತ್ತಾರೆ. ಸುದಾ ನೆಮಣ್ಣವರ ಅವರು ತನ್ನ ಗಂಡನಿಗೆ ಬರತಕ್ಕಂತ ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ಕೊಡಿ ಎಂದು ಕೆ ಎ ಟಿ ಗೆ ಹೋಗಿದ್ದರು ಅದರ ಬಗ್ಗೆ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ನಮಗೆ ಮೊನ್ನೆ ಅಷ್ಟೇ

ಗೊತ್ತಾಯಿತು ಗೊತ್ತಾದ ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸ್ಟೇಯನ್ನು ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಕೆ ಎ ಟಿಯಲ್ಲಿ ಮಾಡಿದ ಆದೇಶದ ಮೇರೆಗೆ ನೀವು ಮೇಲ್ಮನವಿಯನ್ನು ಸಲ್ಲಿಸಿರಾ ಎಂದರೆ ಸಾಕ್ಷಿಯು ನಮಗೆ ಅದರಲ್ಲಿ ಪಾರ್ಟಿ ಮಾಡಿರುವುದಿಲ್ಲ ಮೊನ್ನೆ ಅಷ್ಟೇ ಗೊತ್ತಾಗಿರುತ್ತದೆ ಅದಕ್ಕೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸ್ಟೇ ಆಗಿರುತ್ತದೆ ಎಂದು ನುಡಿಯುತ್ತಾರೆ . ಪ್ರೇಮಾ ಅವರು ಬೋಪಾಲಪ್ಪ ಅವರು ಸಾಯುವ ಮುಂಚೆ ಎಲ್ಲಾ ದಾಖಲೆಗಳನ್ನು ಕೆ ಎ ಟಿಗೆ ಹಾಜರುಪಡಿಸಿ ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ಪಡೆಯಬಹುದಿತ್ತು ಎಂದರೆ ಸಾಕ್ಷಿಯು ಅವರೇ ಹೆಂಡತಿ ಆಗಿರುವುದರಿಂದ ಮತ್ತು ಅದಕ್ಕೆ ಕಾಲಾವಕಾಶ ಇರುವುದರಿಂದ ಸ್ವಲ್ಪ ದಿನ ಅದಕ್ಕೆ ಪೂರಕವಾದ ದಾಖಲೆಗಳನ್ನು ಸಂಗ್ರಹಣೆ ಮಾಡಲು ಇರುವುದರಿಂದ ತಡ ಆಗಿದೆ ಎಂದು ನುಡಿಯುತ್ತಾರೆ. ಸುದಾ ನೆಮಣ್ಣವರ ಅವರು ಕಾಯ್ದೆಶೀರ ಬೋಪಾಲಪ್ಪ ಅವರ ಹೆಂಡತಿ ಎಂದು ಕೆ ಎ ಟಿಗೆ ಹೋಗಿ ಅಲ್ಲಿ ಸರಕಾರಿ ದಾಖಲೆಗಳನ್ನು ಹಾಜರುಪಡಿಸಿದ್ದು ಕೆ ಎ ಟಿ ಅವರು ಅದನ್ನು ಪರಿಶೀಲಿಸಿ ಸುದಾ ಅವರೇ ಬೋಪಾಲಪ್ಪ ಅವರ ಹೆಂಡತಿ ಎಂದು ತಿರ್ಮಾನಿಸಿ ಎಲ್ಲ ಸೌಲಭ್ಯ ಕೊಡಿ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎ ಜಿ ಆಪೀಸನಲ್ಲಿ ಅದು ರಿಜೆಕ್ಟ/ತಿರಸ್ಕಾರ ಆಗಿರುತ್ತದೆ ಮತ್ತು ಸ್ಟೇ ಆಗಿರುತ್ತದೆ ಎಂದು ನುಡಿಯುತ್ತಾರೆ. ಮಾನ್ಯ ದಾರವಾಡ ಉಚ್ಚ ನ್ಯಾಯಾಲಯದಲ್ಲಿ ಸ್ಟೆ ಆಗಿರುತ್ತದೆ . ಅದರ ನಂಬರ ನನಗೆ ನೆನಪಿರುವುದಿಲ್ಲ ಅದರ ದಾಖಲೆಯನ್ನು ನ್ಯಾಯಾಲಯಕ್ಕೆ ನಾನು ಮುಂದೆ ಸಲ್ಲಿಸುತ್ತೇನೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

OS No. 102/2007 ಪಿ. ಡಬ್ಲ್ಯೂ: 2